ಇನ್ನೊಂದು ಉತ್ತರವನ್ನು ಕೊಡಬಾರದು, ಆದ್ದರಿಂದ ಆದಷ್ಟು ಬೇಗ ಕ್ರಮವನ್ನು ತೆಗೆದುಕೊಳ್ಳಿ.

ಡಾ॥ ಹೆಚ್.ಸಿ. ಮಹದೇವಪ್ಪ : ನಾನೇ ಸ್ವತಃ ಹಣಕಾಸಿನ ಇಲಾಖೆಯೊಡನೆ ಮಾತನಾಡಿ ಮೊದಲನೆಯ ಅದ್ಯತೆಯ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಶ್ನೆ ಸಂಖ್ಯೆ : 420 (2437) ಸಚಿವರು ಕಾಲವಕಾಶವನ್ನು ಕೇಳಿದ್ದಾರೆ.

18 ಮತ್ತು 23ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು

ಶಿಗ್ಗಾಂವ್ ತಾಲ್ಲೂಕು ಆಸ್ಪತ್ರೆಗಳ ದುರಸ್ತಿ ಕಾಮಗಾರಿ

1962 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗದಿಂದ ಆಸ್ಪತ್ರೆಗಳ ದುರಸ್ತಿಗಾಗಿ ಎಷ್ಟು ಹಣ 95-96 ರಿಂದ ಈವರೆಗೆ ಖರ್ಚು ಮಾಡಲಾಗಿದೆ, ಯಾವ ಆಸ್ಪತ್ರೆಗಳಿಗೆ ಖರ್ಚು ಮಾಡಲಾಗಿದೆ.

ಆ) ಕಳಪೆ ದರದವರ ಕಾಮಗಾರಿಯ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವುದು ನಿಜವೇ?

ಇ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಶಿಗ್ಗಾಂವ್ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ ಏಪ್ರಿಲ್ 95 ರಿಂದ ಮಾರ್ಚ್ 96ರವರೆಗೆ ಒಟ್ಟು ರೂ. 1.129 ಲಕ್ಷ ಖರ್ಚು ಆಗಿರುತ್ತದೆ.

1)	ಶಿಗ್ಗಾಂವ್ ಸಮುದಾಯ ಆರೋಗ್ಯ ಕೇಂದ್ರ ಕಟ್ಟಡ ದುರಸ್ತಿಗೆ	0.533
2)	ಶಿಗ್ಗಾಂವ್ ಸಮುದಾಯ ಆರೋಗ್ಯ ಕೇಂದ್ರದ 14 ವಸತಿ ಗೃಹಗಳ ದುರಸ್ತಿಗೆ	0.303
3)	ಹಿರೇಬೆಂಡಿಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ದುರಸ್ತಿಗೆ	0.180
4)	ಹಿರೇಬೆಂಡಿಗೇರಿ ಪ್ರಾಥಮಿಕ ಆರೋಗ್ಯ ಕ್ಕೇಂದ್ರದ ಸಿಬ್ಬಂದಿ ವಸತಿಗೃಹ ದುರಸ್ತಿಗೆ	0.048
5)	ಹುಲಗೂರ ಕಿಮಅಸ ವಸತಿಗೃಹ ದುರಸ್ತಿಗೆ	0.065
	ಒಟ್ಟು ರೂ.	1.129

ಆ) ಯಾವುದೇ ದೂರು ಬಂದಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯ ಖರ್ಚಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಒದಗಿಸಿದಂತಹ ಹಣದಿಂದ ಆಸ್ಪತ್ರೆಯನ್ನು ದುರಸ್ಥಿ ಮಾಡುವುದಕ್ಕೆ ಪ್ರಶ್ನೆಯನ್ನು ಕೇಳಿದ್ದೆ, ಈ ಆಸ್ಪತ್ರೆಯ ದುರಸ್ಥಿಯ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಇವತ್ತು 5 ಕಾಮಗಾರಿಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ, ಇನ್ನು ಎರಡು ಕಾಮಗಾರಿಗಳ ಬಗ್ಗೆ ಮಾನ್ಯ ಸಚಿವರು ವಿವರವನ್ನು ನೀಡಿರುವುದಿಲ್ಲ. 7 ಕಾಮಗಾರಿಗಳನ್ನು ತೆಗೆದುಕೊಂಡಿದ್ದರ ಬಗ್ಗೆ ಅಧಿಕೃತವಾದಂತಹ ವರದಿಯನ್ನು ಚೀಫ್ ಎಕ್ಸಿಕ್ಯೂಟೀವ್ ಆಫೀಸರ್, ಶಿಗ್ಗಾಂವ್‌ನಿಂದ ತಂದಿರುತ್ತೇನೆ. ಇವತ್ತು ಅಲ್ಲಿ ಬಂಕಾಪುರ ಎಂಬ ಆಸ್ಪತ್ರಗೆ ಸುಮಾರು 75,000 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆ ಆಸ್ಪತ್ರೆಗೆ ನಾನೂ ಕೂಡ ಭೇಟಿ ನೀಡಿದ್ದೆ. ಆ ಆಸ್ಪತ್ರೆಯಲ್ಲಿ ಅಲ್ಲಿ ಸ್ಥಳೀಯವಾಗಿ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ಉಪ ವಿಭಾಗದವರು ಕೇವಲ 15 ಅಥವಾ 20 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಈ ಬಗ್ಗೆ ಯಾವುದೇ ದೂರುಗಳು ಬಂದಿಲ್ಲವೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿರತಕ್ಕಂತಹ ಬಂಕಾಪುರದ ಜಿಲ್ಲಾ ಸದಸ್ಯರೂ ಕೂಡ ಹಳವಳ್ಳಿ ಎಂಬುವರು ದೂರನ್ನು ನೀಡಿದ್ದಾರೆ. ಈ ಬಗ್ಗೆ ಎಕ್ಸಿಕ್ಯೂಟೀವ್ ಇಂಜಿನೀಯರ್‌ರವರು ಮತ್ತು ಜಿಲ್ಲಾ ಪಂಚಾಯಿತಿಯವರು ವಿಚಾರಣೆಯನ್ನೂ ಕೂಡ ಮಾಡಿಕೊಂಡು ಹೋಗಿದ್ದಾರೆ. ಕಾರಣ ಈ ಆಸ್ಪತ್ರೆಯ ಬಗ್ಗೆ ಏನು ಹಣವನ್ನು ದುರುಪಯೋಗವನ್ನು ಪಡಿಸಿಕೊಂಡಿದ್ದಾರೆ ಇದರ ಬಗ್ಗೆ ಯೋಗ್ಯ ತನಿಖೆಯನ್ನು ಮಾಡಿ ಸೂಕ್ತ ಕ್ರಮವನ್ನು ಸಂಬಂಧಿಸಿದವರ ಮೇಲೆ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಇದು ತಡೆಹಿಡಿಯಲಾದ ಪ್ರಶ್ನೆಯಾಗಿದ್ದು ಇದು ಈಗ ತಾನೇ ನನ್ನ ಇಲಾಖೆಗೆ ವರ್ಗಾವಣೆಯಾಗಿದೆ. ಇದರಲ್ಲಿ ನಾನು ಇರತಕ್ಕಂತಹ ಅಂಕಿ ಅಂಶಗಳ ಆಧಾರದ ಮೇಲೆ ಉತ್ತರವನ್ನು ಕೊಟ್ಟಿದ್ದೇನೆ. ಅವರಲ್ಲಿ ವಿಶೇಷವಾದಂತಹ ಮಾಹಿತಿ ಇದ್ದರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುವುದರಿಂದ ನಾನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ಅದನ್ನು ಕಳುಹಿಸಿ ಅವರ ಮೂಲಕ ಸರಿಪಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್: ಮಾನ್ಯ ಅಧ್ಯಕ್ಷರೆ, ನಾನು ಮಾಹಿತಿಯನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಇದರ ಬಗ್ಗೆ ವಿಚಾರಣೆಯನ್ನು ಜಿಲ್ಲಾ ಪಂಚಾಯ್ತಿಯ ಮತಿಯಿಂದ ಮಾಡಿಸಬಾರದು. ಗ್ರಾಮೀಣಾಭಿವೃದ್ಧಿ ಸಚಿವರ ಗಮನವನ್ನೂ ಸಹ ಈ ವಿಷಯದ ಬಗ್ಗೆ ಸೆಳೆಯುತ್ತಿದ್ದೇನೆ. ಸಚಿವರು ಈ ಬಗ್ಗೆ ನಿರ್ದಿಷ್ಟವಾಗಿ ಆರೋಪವನ್ನು ಮಾಡುತ್ತಿರುವುದರಿಂದ ಅವರು ಸ್ಥಳೀಯವಾಗಿ ಧಾರವಾಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಇಲ್ಲವೇ ಆರ್.ಡಿ.ಪಿ.ಆರ್. ತಮ್ಮ ಸೆಕ್ರೆಟರಿಯವರ ಮುಖಾಂತರ ಖುದ್ದಾಗಿ ಇದರ ಬಗ್ಗೆ ವಿಚಾರಣೆಯನ್ನು ನಡೆಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಒಂದು ವೇಳೆ ಜಿಲ್ಲಾ ಪಂಚಾಯ್ತಿಯವರ ಮೂಲಕ ವಿಚಾರಣೆಯನ್ನು ಮಾಡಿದರೆ ನಮಗೆ ನ್ಯಾಯ ಸಿಗುವುದಿಲ್ಲವೆಂದು ಒಂದು ಮಾತನ್ನು ಹೇಳುತ್ತಿರುವುದರಿಂದ ಇದರ ಬಗ್ಗೆ ಕೂಡಲೇ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟಂತಹ ಸಚಿವರಿಗೆ ಮನವಿಯನ್ನು ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಕಳಪೆ ಕಾಮಗಾರಿಯನ್ನು ಯಾರು ಮಾಡಿದರೂ ಕೂಡ ಅದು ಅಪರಾಧವೇ; ಅದರ ಬಗ್ಗೆ ಜಿಲ್ಲಾ ಪಂಚಾಯತಿಯ

ಅಧಿಕಾರಿಗಳಿಂದ ಸರಿಯಾದಂತಹ ವರದಿಯು ಬರಲಾರದು ಎನ್ನುವುದು ಅನುಮಾನವಾಗಿದ್ದರೆ, ಜಿಲ್ಲಾಧಿಕಾರಿಗಳಿಂದಲೂ ಸಹ ಮಾಡಿಸಲು ನಾನು ತಯಾರು ಇದ್ದೇನೆ. ತಾವು ಅದನ್ನು ಕಳುಹಿಸಿಕೊಟ್ಟರೆ ತಕ್ಷಣ ಮಾಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಅಂಕೋಲ, ಸಿರ್ಸಿ, ಯಲ್ಲಾಪುರಗಳಲ್ಲಿ ಹೊಸದಾಗಿ ಕಾಲೇಜು ಸ್ಥಾಪಿಸುವುದು

1174 - ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲಾ, ಸಿರ್ಸಿ, ಯಲ್ಲಾಪುರದಲ್ಲಿ ಹೊಸದಾಗಿ ಕಾಲೇಜು ಪ್ರಾರಂಭ ಮಾಡುವ ಪ್ರಸ್ತಾವನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ; (ತಾಲ್ಲೂಕುವಾರು ವಿವರ ನೀಡುವುದು)

ಆ) ಹೊಸ ಕಾಲೇಜು ಸ್ಥಾಪಿಸಲು ಸರ್ಕಾರದವರ ಸೂತ್ರಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ. ಈಗಾಗಲೇ ಯಲ್ಲಾಪುರದಲ್ಲಿ ಸರ್ಕಾರಿ ಕಾಲೇಜಿದೆ.

ಆ) ಅಗತ್ಯತೆ ಮತ್ತು ಬೇಡಿಕೆಗಳನ್ನು ಆಧರಿಸಿ ಸರ್ಕಾರಿ ಕಾಲೇಜುಗಳನ್ನು ಸ್ಥಾಪಿಸಲಾಗುತ್ತಿದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಯಲ್ಲಾಪುರ್, ಅಂಕೋಲ, ಸಿರಸಿ, ಈ ತಾಲ್ಲೂಕುಗಳ ಕಾಲೇಜಿನ ಬಗ್ಗೆ ಸ್ಪಷ್ಟೀಕರಣವನ್ನು ಮಾನ್ಯ ಸಚಿವರಿಗೆ ಕೇಳಿದ್ದೆ. ಅಂಕೋಲ ತಾಲ್ಲೂಕಿನ ಕೇಂದ್ರದಲ್ಲಿಯೇ ಸರ್ಕಾರದ ವತಿಯಿಂದ ಒಂದು ಜ್ಯೂನಿಯರ್ ಕಾಲೇಜು ಮತ್ತು ಪದವಿ ಕಾಲೇಜೂ ಸಹ ಇರುವುದಿಲ್ಲ, ಇದರಿಂದ ಅಲ್ಲಿಯ ವಿದ್ಯಾರ್ಥಿಗಳು ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ. ಅವರು ಅಕ್ಕಪಕ್ಕದ ತಾಲ್ಲೂಕುಗಳಿಗೆ ವಿದ್ಯಾಭ್ಯಾಸಕ್ಕಾಗಿ ಹೋಗುತ್ತಿದ್ದಾರೆ. ಅಲ್ಲಿ ಕಾಲೇಜು ತುಂಬಾ ಅಗತ್ಯವಾಗಿದೆ, ಆದರೆ ಇದುವರೆಗೂ ಅಗತ್ಯವಿರುವ ಬಗ್ಗೆ ಸರ್ಕಾರದ ಗಮನಕ್ಕೆ ಏಕೆ ಬಂದಿಲ್ಲ? ಸರ್ಕಾರದ ಅಧಿಕಾರಿಗಳು ಅಲ್ಲಿಯ ಅಗತ್ಯದ ಬಗ್ಗೆ ಸರ್ಕಾರದ ಗಮನಕ್ಕೆ ತಂದಿಲ್ಲ, ಎರಡನೆಯದಾಗಿ ಅಗತ್ಯತೆ ಮತ್ತು ಬೇಡಿಕೆಗಳನ್ನು ಆಧರಿಸಿ ಸರ್ಕಾರಿ ಕಾಲೇಜುಗಳನ್ನು ಸ್ಥಾಪಿಸಲಾಗುವುದು ಎನ್ನುವುದನ್ನು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಈ ಅಗತ್ಯತೆ ಮತ್ತು ಬೇಡಿಕೆ ಎನ್ನುವುದಕ್ಕೆ ಸ್ಪಷ್ಟೀಕರಣ ಏನು? ಇದನ್ನು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಈ ಕಾಲೇಜು ಯಲ್ಲಾಪುರದಲ್ಲಿಯೂ ಮತ್ತು ಶಿರಸಿಯಲ್ಲಿಯೂ ಇದೆ ಬೇಡಿಕೆಗಳು ಬಂದಾಗ ಕಾಲೇಜುಗಳನ್ನು ಕೊಡತಕ್ಕಂತಹ ಸಂದರ್ಭ ಬಂದಾಗ, ಈ ಸಲದಿಂದ ಒಂದು ದಿಕ್ಕೂಚಿಯನ್ನು ಮಾಡುತ್ತಿದ್ದೇವೆ. ಏನೆಂದರೆ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಕಾಲೇಜುಗಳನ್ನು ತೆರೆಯಲು ಅವಕಾಶವನ್ನು ಮೊದಲನೆಯದಾಗಿ ಕೊಡಬೇಕು. ಅದರಲ್ಲಿ ಉತ್ತರ ಕನ್ನಡದಲ್ಲಿ ಸರ್ಕಾರಿ ಕಾಲೇಜುಗಳನ್ನು ತೆಗೆಯುತ್ತುದಕ್ಕೆ ಎರಡನೆಯ ಅವಕಾಶವನ್ನು ಕೊಡುತ್ತಿದ್ದೇವೆ, ಏಕೆಂದರೆ, ಅಲ್ಲಿ ಖಾಸಗಿ ಕಾಲೇಜುಗಳೇ ಹೆಚ್ಚು ಇರುವುದರಿಂದ ಬಡವರಿಗೆ, ಬಡವರ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುವುದಕ್ಕೆ ಸರ್ಕಾರಿ ಕಾಲೇಜುಗಳ ಅವಶ್ಯಕತೆ ಇರುತ್ತದೆ. ಮೂರನೆಯ ಅಂಶ ಏನೆಂದರೆ, ಕಾಲೇಜನ್ನು ತೆರೆಯುವಂತಹ ಕಡೆ ಜಾಗವನ್ನು ಮತ್ತು ಸಾರ್ವಜನಿಕ ವಂತಿಕೆಯಿಂದ 5 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಇಷ್ಟು ಮಾಡಿದರೆ ಮುಂದಿನ ಯಾವ್ಯಾವ ತಾಲ್ಲೂಕುಗಳಿಗೆ ಕಾಲೇಜುಗಳು ಬೇಕಾಗುತ್ತದೆಯೋ ಅವುಗಳ